ಉತ್ತರ

ಅ) ಭೂಮಿ – ಭೂ ದಾಖಲೆಗಳ ಗಣಕೀಕರಣ ಯೋಜನೆಯನ್ನು ಕೋಲಾರ ಜಿಲ್ಲೆಯ ಎಲ್ಲ ೧೧ ತಾಲ್ಲೂಕುಗಳು ಮತ್ತು ೧ ವಿಶೇಷ ತಹಸೀಲ್ದಾರ್ ಕಛೇರಿಯಲ್ಲಿಯೂ ಜಾರಿಗೊಳಿಸಲಾಗಿದ್ದು ನೆಮ್ಮದಿ ಯೋಜನೆಯಡಿ ಹೋಬಳಿ ಮಟ್ಟಕ್ಕೂ ವಿಸ್ತರಿಸಲಾಗಿದೆ. ಇಲ್ಲಿಯವರೆಗೆ, ಕೋಲಾರ ಜಿಲ್ಲೆಯ ೫೩ ಹೋಬಳಿಗಳಲ್ಲಿ ೫೨ ಹೋಬಳಿಗಳಲ್ಲಿ ನೆಮ್ಮದಿ ಕೇಂದ್ರಗಳನ್ನು ತೆರೆಯಲಾಗಿದ್ದು, ಈ ಕೇಂದ್ರಗಳಿಂದ ಗಣಕೀಕೃತ ವಹಣಿಗಳನ್ನು ವಿತರಿಸಲಾಗುತ್ತಿದೆ.

ಆ) ಗೌರಿಬಿದನೂರು ತಾಲ್ಲೂಕಿನ ಎಲ್ಲಾ ಆರು ಹೋಬಳಿಗಳಲ್ಲಿಯೂ ನೆಮ್ಮದಿ ಕೇಂದ್ರಗಳನ್ನು ತೆರೆಯಲಾಗಿದೆ.

ಇ) ಕೋಲಾರ ಜಿಲ್ಲೆಯಲ್ಲಿ ಬಾಕಿ ಉಳಿದಿರುವ ಒಂದು ಹೋಬಳಿಯಲ್ಲಿ ನೆಮ್ಮದಿ ಕೇಂದ್ರವನ್ನು ಬರುವ ಒಂದು ವಾರದೊಳಗೆ ತೆರೆಯಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೭೬ (೨೨೭೪)

ಸದಸ್ಯರ ಹೆಸರು : ಶ್ರೀ ಶಿವಶಂಕರಪ್ಪ ಟಿ.ಹೆಚ್ (ತರೀಕೆರೆ)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ಚಿಕ್ಕಮಗಳೂರು ಜಿಲ್ಲೆಯ ೭ ತಾಲ್ಲೂಕುಗಳಲ್ಲಿ ಎಷ್ಟು ತಾಲ್ಲೂಕುಗಳು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲಾಗಿದೆ.

ಆ) ತರೀಕೆರೆ ತಾಲ್ಲೂಕುಗಳಲ್ಲಿ ಕಳೆದ ಮೂರು ವರ್ಷದಿಂದ ಬಿದ್ದ ಮಳೆ ಪ್ರಮಾಣ ಎಷ್ಟು (ಅಂಕಿ ಅಂಶ ತಿಳಿಸುವುದು) ;

ಇ) ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು ಸಂಬಂಧಪಟ್ಟಮತೆ ೭ ತಾಲ್ಲೂಕುಗಳಲ್ಲಿ ವರ್ಷಕ್ಕೆ ಎಷ್ಟು ಪ್ರಮಾಣದ ಮಳೆಯಾಗಿದೆ (ಅಂಕಿ ಅಂಶ ತಿಳಿಸುವುದು) ;

ಈ) ತರೀಕೆರೆ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆಯಾಗಿದೆಯೇ ಅಥವಾ ಇಲ್ಲವೇ? ಹಾಗಿದ್ದಲ್ಲಿ, ಏಕೆ ಬರಗಾಲದ ಪೀಡಿತ ಪ್ರದೇಶವೆಂದು ಘೋಷಣೆಯಾಗಿರುವುದಿಲ್ಲ?

ಉತ್ತರ

ಅ) ಕಡೂರು ಮತ್ತು ಚಿಕ್ಕಮಗಳೂರು ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ.

	ವಾಡಿಕೆ ಮಳೆ	ವಾಸ್ತವಿಕವಾಗಿ ಬಿದ್ದ ಮಳೆ	ಶೇಕಡಾವಾರು ಬಿದ್ದ ಮಳೆ
೨೦೦೪	೮೯೭.೦	೭೯೦.೪	೮೮.೧೧
೨೦೦೫	೮೯೭.೦	೧೧೮೨.೨	೧೩೧.೭೯
೨೦೦೫	೮೯೭.೦	೮೩೮.೩	೯೩.೪೫

ಇ) ೨೦೦೬ನೇ ಸಾಲಿನ ಚಿಕ್ಕಮಗಳೂರು ಜಿಲ್ಲೆಯ ೭ ತಾಲ್ಲೂಕುಗಳ ಮಳೆಯ ವಿವರ ಕೆಳಕಂಡಂತಿರುತ್ತದೆ.

	ವಾಡಿಕೆ ಮಳೆ	ವಾಸ್ತವಿಕವಾಗಿ ಬಿದ್ದ ಮಳೆ	ಶೇಕಡಾವಾರು ಬಿದ್ದ ಮಳೆ
ಚಿಕ್ಕಮಗಳೂರು	೯೧೭.೦	೧೦೧೬.೬	೧೧೦.೯
ಕಡೂರು	೫೬೧.೦	೩೮೪.೭	೬೮.೬
ಕೊಪ್ಪ	೩೦೧೪.೦	೩೫೯೪.೯	೧೧೯.೩
ಮೂಡಿಗೆರೆ	೨೨೮೩.೦	೩೭೨೪.೦	೧೬೩.೧
ನರಸಿಂಹರಾಜಪುರ	೧೬೮೭.೦	೧೮೧೨.೬	೧೦೭.೪
ಶೃಂಗೇರಿ	೩೮೪೮.೦	೫೮೭೬.೯	೧೫೨.೮
ತರೀಕೆರೆ	೮೯೭.೦	೮೩೮.೩	೯೩.೫

ಈ) ೧.೧.೨೦೦೬ ರಿಂದ ೧೬.೮.೨೦೦೬ರ ಅವಧಿಯಲ್ಲಿ ಚಿಕ್ಕಮಗಳೂರು ಮತ್ತು ಕಡೂರು ತಾಲ್ಲೂಕುಗಳಲ್ಲಿ ಸತತವಾಗಿ ನಾಲ್ಕು ವಾರಗಳ ಡ್ರೈಸ್ಪೆಲ್ (ಒಣಹವೆ) ಇದ್ದುದರಿಂದ ಈ ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ.

ಆದರೆ ತರೀಕೆರೆ ತಾಲ್ಲೂಕಿನಲ್ಲಿ ಈ ಅವಧಿಯಲ್ಲಿ ಸತತವಾಗಿ ೪ ವಾರಗಳ ಡೈಸ್ಪೆಲ್ (ಒಣಹವೆ) ಇಲ್ಲದೇ ಇದ್ದುದರಿಂದ ಹಾಗೂ ವಾಡಿಕೆಯಂತೆ ಮಳೆ ಆಗಿರುವದರಿಂದ ತರೀಕೆರೆ ತಾಲ್ಲೂಕನ್ನು ಬರಪೀಡಿತವೆಂದು ಘೋಷಿಸಿರುವುದಿಲ್ಲ.